# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ : 158 (180)
2. ವಿಧಾನ ಪರಿಷತ್ ಸದಸ್ಯರ ಹೆಸರು : ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ
3. ಉತ್ತರಿಸುವ ಸಚಿವರು : ತೋಟಗಾರಿಕೆ ಸಚಿವರು
4. ಉತ್ತರಿಸಬೇಕಾದ ದಿನಾಂಕ : 03-03-2020.

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| 1. | ಉತ್ತರ ಕರ್ನಾಟಕದ ತೋಟಗಾರಿಕೆ ಮುಖ್ಯ ಬೆಳೆಯಾದ ದ್ರಾಕ್ಷಿ ಬೆಳೆಗಾರರು ಪ್ರತಿವರ್ಷ ಬೆಳೆದ ಉತ್ಪನ್ನಗಳಿಗೆ ನ್ಯಾಯ ಸಮ್ಮತ ಬೆಲೆ ಸಿಗದೆ ಸಮಸ್ಯೆ ಎದುರಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಹೌದು |
| 2 | ಎಷ್ಟು ಜಮೀನಿನಲ್ಲಿ ಎಷ್ಟು ಪ್ರಮಾಣದ ದ್ರಾಕ್ಷಿಯನ್ನು ಉತ್ಪಾದಿಸಲಾಗುತ್ತಿದೆ? (ಜಿಲ್ಲಾವಾರು ಮಾಹಿತಿ ನೀಡುವುದು) | ಬೀಜರಹಿತ, ಅನಾಬೆಶಾಹಿ, ಬೆಂಗಳೂರು ಬ್ಲೂ, ಶರತ್ ಸೀಡ್ ಲೆಸ್, ವೈನ್ ತಳಿಗಳು ಮತ್ತು ಇತರೆ ತಳಿಗಳನ್ನು ಒಳಗೊಂಡು ಅಂದಾಜು 26,600 ಹೆಕ್ಟೇರ್ ಜಮೀನಿನಲ್ಲಿ ದ್ರಾಕ್ಷಿಯನ್ನು ಬೆಳೆಯಲಾಗುತ್ತಿದ್ದು, ಒಟ್ಟು 5.24 ಲಕ್ಷ ಮೆ.ಟನ್ ಉತ್ಪಾದಿಸಲಾಗುತ್ತಿದೆ. ಜಿಲ್ಲಾವಾರು ಮಾಹಿತಿಯನ್ನು ಅನುಬಂಧ ದಲ್ಲಿ ನೀಡಲಾಗಿದೆ. |
| 3 | ರಾಜ್ಯದಲ್ಲಿ ಪ್ರತಿವರ್ಷ ಎಷ್ಟು ಹೆಕ್ಟೇರ್ ಜಮೀನಿನಲ್ಲಿ ದ್ರಾಕ್ಷಿ ಬೆಳೆ ಬೆಳೆಯಲಾಗುತ್ತದೆ? | ರಾಜ್ಯದಲ್ಲಿ ಪ್ರತಿವರ್ಷ ಅಂದಾಜು 26,600 ಹೆಕ್ಟೇರ್ ಜಮೀನಿನಲ್ಲಿ ವಿವಿಧ ತಳಿಗಳ ದ್ರಾಕ್ಷಿ ಬೆಳೆ ಬೆಳೆಯಲಾಗುತ್ತಿದೆ. |
| 4 | ದ್ರಾಕ್ಷಿ ಹಣ್ಣನ್ನು ರಫ್ತು ಮಾಡುವುದರ ಮುಖಾಂತರ ರೈತರಿಗೆ ಯೋಗ್ಯಬೆಲೆ ದೊರಕಿಸಿಕೊಡುವುದರೊಂದಿಗೆ ವಿದೇಶಿ ವಿನಿಮಯದಲ್ಲಿ ಗಳಿಕೆ ಮಾಡಲು ಸರ್ಕಾರ ಯಾವ ಕ್ರಮಕೈಗೊಂಡಿದೆ? | ದ್ರಾಕ್ಷಿ ಹಣ್ಣನ್ನು ರಫ್ತು ಮಾಡುವುದರ ಮುಖಾಂತರ ರೈತರಿಗೆ ಯೋಗ್ಯಬೆಲೆ ದೊರಕಿಸಿಕೊಡಲು ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ:<br>1.ತಾಜಾ ದ್ರಾಕ್ಷಿ ಹಣ್ಣು ಹಾಗೂ ಇನ್ನಿತರೆ ತೋಟಗಾರಿಕೆ ಬೆಳೆಗಳನ್ನು ರಫ್ತು ಮಾಡಲು ಅನುಕೂಲವಾಗುವಂತೆ ಅವಶ್ಯಕವಿರುವ ಕೊಯ್ಲಿನ ನಂತರದ ಮೂಲಭೂತ ಸೌಕರ್ಯಗಳಾದ ಪ್ಯಾಕ್‌ಹೌಸ್, ಪ್ರೀ-ಕೂಲಿಂಗ್ ಘಟಕ, ಶೀತಲಗೃಹ, ಶೀತಲವಾಹನ ಮುಂತಾದವುಗಳನ್ನು ಕೆಪೆಕ್ ಸಂಸ್ಥೆಯಿಂದ ಉತ್ತರ ಕರ್ನಾಟಕದಲ್ಲಿ ವಿಜಯಪುರ, ಬಾಗಲಕೋಟೆ, ಹುಬ್ಬಳ್ಳಿ, ಕುಷ್ಟಗಿ ಹಾಗೂ ಹುಮ್ನಾಬಾದ್‌ಗಳಲ್ಲಿ ಸ್ಥಾಪಿಸಲಾಗಿದೆ.<br>2.ರಫ್ತು ಯೋಗ್ಯ ಗುಣಮಟ್ಟದ ದ್ರಾಕ್ಷಿ ಬೆಳೆಯಲು ಅನುಕೂಲವಾಗುವಂತೆ ಅನುಸರಿಸಬೇಕಾದ ಬೇಸಾಯ ಕ್ರಮಗಳ ಕುರಿತಂತೆ ಭಾರತೀಯ ತೋಟಗಾರಿಕಾ ಸಂಶೋಧನಾ ಸಂಸ್ಥೆಯ ಸಹಯೋಗದೊಂದಿಗೆ ಕೈಪಿಡಿಯನ್ನು ಪ್ರಕಟಿಸಿ ರೈತರಿಗೆ ವಿತರಿಸಲಾಗಿದೆ |

| | | |
|---|---|---|
| | | ಹಾಗೂ ಈ ನಿಟ್ಟಿನಲ್ಲಿ ನುರಿತ ವಿಜ್ಞಾನಿಗಳೊಂದಿಗೆ ಕಾರ್ಯಾಗಾರವನ್ನು ಸಹ ಏರ್ಪಡಿಸಲಾಗಿದೆ.<br>3. ಅಪೆಡಾ ಸಹಯೋಗದೊಂದಿಗೆ ರಾಜ್ಯದಲ್ಲಿ ರಫ್ತು ಯೋಗ್ಯ ಗುಣಮಟ್ಟದ ದ್ರಾಕ್ಷಿ ಉತ್ಪಾದಿಸುವ ರೈತರಿಗೆ ರಫ್ತು ಮಾಡಲು ಅನುವಾಗುವಂತೆ "Grapenet"ನಲ್ಲಿ ನೋಂದಾಯಿಸಲು ತೋಟಗಾರಿಕೆ ಇಲಾಖೆಯಿಂದ ಕ್ರಮ ಕೈಗೊಳ್ಳಲಾಗಿದೆ.<br>4. ದ್ರಾಕ್ಷಿ ಬೆಳೆಗಾರರಿಗೆ ಉತ್ತಮ ಗುಣಮಟ್ಟದ ದ್ರಾಕ್ಷಿ ಬೆಳೆಯಲು ಪ್ರದೇಶ ವಿಸ್ತರಣೆಗೆ ಆರ್ಥಿಕ ನೆರವು ನೀಡಲಾಗುತ್ತಿದೆ.<br>5. ದ್ರಾಕ್ಷಿ ಬೆಳೆಯು ಅತಿ ಶೀಘ್ರವೇ ಹಾಳಾಗುವ ಗುಣ ಹೊಂದಿರುವುದರಿಂದ ಕಟಾವಿನ ನಂತರದ ಸಮರ್ಪಕ ನಿರ್ವಹಣೆಗೆ ಅಗತ್ಯವಿರುವ ಮೂಲ ಸೌಲಭ್ಯಗಳಾದ ಪ್ಯಾಕ್ ಹೌಸ್ , ರೆಸಿನ್ ಶೆಡ್, ಇತ್ಯಾದಿಗಳನ್ನು ನಿರ್ಮಿಸಲು ನೆರವು ನೀಡಲಾಗುತ್ತಿದೆ.<br>6. ತಾಜಾ ದ್ರಾಕ್ಷಿಯನ್ನು ಸಂಸ್ಕರಿಸಿ ಒಣದ್ರಾಕ್ಷಿಯನ್ನಾಗಿಸಲು ಮೂಲ ಸೌಲಭ್ಯ ಕಲ್ಪಿಸಲು ಸಹಾಯಧನ ನೀಡಲಾಗುತ್ತಿದೆ.<br>7. ದ್ರಾಕ್ಷಿ ಕಟಾವಿನ ನಂತರದ ಸಮರ್ಪಕ ಹ್ಯಾಂಡ್ಲಿಂಗ್ ಮತ್ತು ಸಾಗಣೆಗಾಗಿ ಪ್ಲಾಸ್ಟಿಕ್ ಕ್ರೇಟ್ ಗಳ ಬಳಕೆಯನ್ನು ಪ್ರೋತ್ಸಾಹಿಸಿ ಸಹಾಯಧನ ನೀಡಲಾಗುತ್ತಿದೆ.<br>8.ದ್ರಾಕ್ಷಿ ಬೆಳೆಯನ್ನು ಪಕ್ಷಿಗಳ ಬಾಧೆಯಿಂದ ರಕ್ಷಿಸಲು ಅಂಟಿ ಬರ್ಡ ನೆಟ್‌ಗಾಗಿ ಸಹಾಯಧನ ನೀಡಲಾಗುತ್ತಿದೆ. |

**ಸಂ:ತೋಇ 65 ತೋಇವಿ 2020**

**(ನಾರಾಯಣ ಗೌಡ)**

**ಪೌರಾಡಳಿತ, ತೋಟಗಾರಿಕೆ ಮತ್ತು ರೇಷ್ಮೆ ಸಚಿವರು**

C:\Users\Asst-Adm-Horti\Desktop\LCQ !) Veg\LCQ-180.Docx

# ದ್ರಾಕ್ಷಿ ಬೆಳೆಯ ಜಿಲ್ಲಾವಾರು ಮಾಹಿತಿ

(ವಿಸ್ತೀರ್ಣ : ಹೆಕ್ಟೇರುಗಳಲ್ಲಿ, ಉತ್ಪಾದನೆ : ಮೆ.ಟನ್ನುಗಳಲ್ಲಿ)

| ಕ್ರಮ ಸಂಖ್ಯೆ | ಜಿಲ್ಲೆಗಳು | ಅ. ಬೆಂಗಳೂರು ನೀಲಿ | | ಆ. ಅನಾಬಿ ಷಾಹಿ | | ಇ. ಬೀಜರಹಿತ | | ಈ. ವೈನ್ ಗ್ರೇಪ್ | | ಉ. ಇತರೆ | | ಒಟ್ಟು - ದ್ರಾಕ್ಷಿ | |
|---|---|---|---|---|---|---|---|---|---|---|---|---|---|
| | | ವಿಸ್ತೀರ್ಣ | ಉತ್ಪನ್ನ | ವಿಸ್ತೀರ್ಣ | ಉತ್ಪನ್ನ | ವಿಸ್ತೀರ್ಣ | ಉತ್ಪನ್ನ | ವಿಸ್ತೀರ್ಣ | ಉತ್ಪನ್ನ | ವಿಸ್ತೀರ್ಣ | ಉತ್ಪನ್ನ | ವಿಸ್ತೀರ್ಣ | ಉತ್ಪನ್ನ |
| 1 | ಬೆಂಗಳೂರು (ನ) | 428 | 9009 | 4 | 80 | 0 | 0 | 8 | 200 | 0 | 0 | **440** | **9289** |
| 2 | ಬೆಂಗಳೂರು (ಗ್ರಾ) | 1434 | 26434 | 165 | 4094 | 227 | 2448 | 82 | 438 | 310 | 3265 | **2218** | **36679** |
| 3 | ಚಿಕ್ಕಬಳ್ಳಾಪುರ | 635 | 16740 | 1750 | 66074 | 184 | 3908 | 3 | 45 | 436 | 11245 | **3008** | **98012** |
| 4 | ಚಿತ್ರದುರ್ಗ | 0 | 0 | 0 | 0 | 0 | 0 | 0 | 0 | 0 | 0 | **0** | **0** |
| 5 | ದಾವಣಗೆರೆ | 0 | 0 | 0 | 0 | 1 | 8 | 0 | 0 | 0 | 0 | **1** | **8** |
| 6 | ಕೋಲಾರ | 167 | 3468 | 7 | 178 | 1 | 18 | 0 | 0 | 10 | 130 | **185** | **3793** |
| 7 | ರಾಮನಗರ | 6 | 23 | 0 | 0 | 0 | 0 | 0 | 0 | 0 | 0 | **6** | **23** |
| 8 | ಶಿವಮೊಗ್ಗ | 0 | 0 | 0 | 0 | 0 | 0 | 0 | 0 | 0 | 0 | **0** | **0** |
| 9 | ತುಮಕೂರು | 47 | 836 | 3 | 48 | 0 | 0 | 0 | 0 | 10 | 52 | **60** | **936** |
| 10 | ಬಾಗಲಕೋಟೆ | 2 | 6 | 130 | 1808 | 2532 | 39417 | 59 | 645 | 12 | 93 | **2735** | **41968** |
| 11 | ಬೆಳಗಾವಿ | 0 | 0 | 0 | 0 | 4596 | 73410 | 16 | 176 | 0 | 0 | **4612** | **73585** |
| 12 | ವಿಜಾಯಾಪುರ | 0 | 0 | 0 | 0 | 11251 | 225020 | 175 | 3500 | 0 | 0 | **11426** | **228520** |
| 13 | ಧಾರವಾಡ | 0 | 0 | 0 | 0 | 0 | 0 | 0 | 0 | 0 | 0 | **0** | **0** |
| 14 | ಗದಗ | 0 | 0 | 0 | 0.00 | 50 | 570 | 0 | 0.00 | 0.00 | 0 | **50** | **570** |
| 15 | ಹಾವೇರಿ | 0 | 0 | 0.00 | 0 | 0.00 | 0 | 0 | 0 | 0 | 0 | **0** | **0** |
| 16 | ಉತ್ತರ ಕನ್ನಡ | 0 | 0 | 0 | 0 | 0 | 0 | 0 | 0 | 0 | 0 | **0** | **0** |
| 17 | ಬಳ್ಳಾರಿ | 2 | 45 | 11 | 212 | 372 | 5939 | 0.00 | 0 | 0.00 | 0 | **385** | **6196** |
| 18 | ಬೀದರ್ | 2 | 50 | 0 | 0 | 143 | 1144 | 12 | 208 | 0 | 0 | **157** | **1402** |
| 19 | ಕಲಬುರಗಿ | 0 | 0 | 0 | 0 | 512 | 10757 | 0 | 0 | 8 | 120 | **520** | **10877** |
| 20 | ಕೊಪ್ಪಳ | 0 | 0 | 0 | 0 | 664 | 11161 | 0 | 0 | 0 | 0 | **664** | **11161** |
| 21 | ರಾಯಚೂರು | 0 | 0 | 0 | 0 | 0 | 0 | 0 | 0 | 0 | 0 | **0** | **0** |
| 22 | ಯಾದಗಿರಿ | 0 | 0 | 0 | 0 | 4 | 60 | 3 | 45 | 0 | 0 | **7** | **105** |
| 23 | ಚಾಮರಾಜನಗರ | 0 | 0 | 0 | 0 | 0 | 0 | 0 | 0 | 0 | 0 | **0** | **0** |
| 24 | ಚಿಕ್ಕಮಗಳೂರು | 0 | 0 | 3 | 75 | 0 | 0 | 0 | 0 | 0 | 0 | **3** | **75** |
| 25 | ದಕ್ಷಿಣ ಕನ್ನಡ | 0 | 0.00 | 0 | 0.00 | 0 | 0.00 | 0.00 | 0 | 0.00 | 0 | **0** | **0** |
| 26 | ಹಾಸನ | | | | | | | | | | | **0** | **0** |
| 27 | ಕೊಡಗು | 0 | 0 | 0 | 0 | 0 | 0 | 0 | 0 | 0 | 0 | **0** | **0** |
| 28 | ಮಂಡ್ಯ | 0 | 0 | 0 | 0 | 0 | 0 | 0 | 0 | 0 | 0 | **0** | **0** |
| 29 | ಮೈಸೂರು | 0 | 0 | 0 | 0 | 0 | 0 | 137 | 1056 | 0 | 0 | **137** | **1056** |
| 30 | ಉಡುಪಿ | 0 | 0 | 0 | 0 | 0 | 0 | 0 | 0 | 0 | 0 | **0** | **0** |
| ರಾಜ್ಯದ ಮೊತ್ತ | | **2723** | **56610** | **2072** | **72568** | **20537** | **373860** | **495** | **6312** | **786** | **14905** | **26614** | **524255** |